ಮುಖ ಮರೆಯಾಗಿರುವ ಹೆಣ್ಣು ಮಕ್ಕಳ ಆಕೃತಿಗಳ ಕೆತ್ತನೆ-ಹಾಗೂ ಅದರ ಕೆಳಗೆ ಬರೆದಿದ್ದ ವಿಮೆನ್ ಆಫ್ ವರ್ಲ್ಡ್‌ವಾರ್ ಎಂಬ ಎರಡು ಪದಗಳು. ಆಮೇಲೆ ಅಲ್ಲೇ ಹುಡುಕಿ ನೋಡಿದೆ– ಆರೂವರೆ ಲಕ್ಷ ಹೆಂಗಸರು ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಸುಮಾರು ಆರು ಲಕ್ಷ ಜನ ಬಗೆಬಗೆಯ ಸೈನಿಕ ವೃತ್ತಿಯವರು, ಜಗತ್ತಿನ ಬೇರೆ ಎಲ್ಲ ದೇಶಗಳಲ್ಲೂ ಮಹಾಯುದ್ಧದ ಮಹಿಳೆಯರಿಗೆ ಸ್ಮಾರಕವಿದ್ದರೂ ಇಂಗ್ಲೆಂಡಿನಲ್ಲಿ ಇಲ್ಲವೆಂದು ಅದು ಯಾರೋ ಸೈನ್ಯಾಧಿಕಾರಿ ಸರ್ಕಾರವನ್ನು ಒತ್ತಾಯಿಸಿ, ಅದು ಯಾರೋ ಕಲಾವಿದ ರೂಪಿಸಿದ ಸ್ಮಾರಕ ಈಗ ಈ ನಿರ್ಜನ ಬೀದಿಯಲ್ಲಿ ನೋಡಿದವರ ಕಣ್ಣು ಮನಸು ತುಂಬುವ ಹಾಗೆ ನಿಂತಿದೆ. ಮೇಲೆ ಆಕಾಶದಲ್ಲಿ ನಮ್ಮ ಎಡಭಾಗದದಲ್ಲಿ ಇದ್ದ ಮಂಕು ಸೂರ್ಯನ ಬಿಸಿಲು ಮಹಿಳೆಯರ ವಿಗ್ರಹ ಸರಣಿಯ ಮೇಲೆ ಮರದ ಎಲೆಗಳ ಅಲುಗಾಡುವ ನೆರಳನ್ನು ಬೀಳಿಸಿತ್ತು. ಶಾಲೆ, ಚರ್ಚು, ಆಫೀಸುಗಳಲ್ಲಿ ಬಳಸುವ ಕಪ್ಪು ಕಲ್ಲಿನ ಮೇಲೆ ಕಂಚಿನಲ್ಲಿ ರೂಪಿಸಿದ ಆಳೆತ್ತರದ ಹೆಣ್ಣಾಕಾರಗಳಿವೆ. ಅವು ಹೆಂಗಸರು ತೊಡುವ ಉಡುಪುಗಳಷ್ಟೇ!. ಹ್ಯಾಂಗರಿಗೆ ನೇತು ಹಾಕಿದ ನಿಲುವಂಗಿ, ಕೋಟು, ಹ್ಯಾಟುಗಳ ಹಾಗೆ ಕಾಣುತ್ತವೆ. ಆ ಉಡುಪುಗಳೆಲ್ಲ ಹೆಣ್ಣು ತೊಡುವಂಥವು. ಕಲಾವಿದ ಯಾರೋ ಏನೋ. ಗಂಡು ಜೀವ ಹೆಣ್ಣು ಜೀವ ಎರಡೂ ತೊಡುವ ಉಡುಪು ಅನ್ನುವುದನ್ನು ಹೀಗೆ ತೋರಿದ್ದಾನಲ್ಲಾ! ಮಹಾಯುದ್ಧದಲ್ಲಿ ಜೀವ ತೇಯ್ದ ಲಕ್ಷಾಂತರ ಹೆಣ್ಣು ಜೀವ ಸಮೂಹಕ್ಕೆ ಕಲೆಯ ನೆನಪಿನ ಕಾಣಿಕೆ ಸಲ್ಲಿಸಿದ್ದು ಇಪ್ಪತ್ತೊಂದನೆಯ ಶತಮಾನ ಆರಂಭವಾದ ಮೇಲೆ.

ಹೆಣ್ಣುಗಳ ನೆನಪು ಬಂದದ್ದು ತಡವಾಗಿಯಾದರೂ ವೈಟ್ ಹಾಲ್‌ನ ಎರಡೂ ಬದಿಯಲ್ಲಿರುವ ಬೃಹತ್ ಕಟ್ಟಡಗಳು ಅಧಿಕಾರದ ಬೃಹದಾಕಾರವನ್ನೂ ಭಾರವನ್ನೂ ಮನಸಿನ ಮೇಲೆ ಹೇರುವ ಹಾಗೇ ಇವೆ. ಮೊದಲ ಬಾರಿಗೆ ದೆಹಲಿಗೆ ಹೋದಾಗಲೂ ಹೀಗೇ ಅನಿಸಿತ್ತು. ಇಡೀ ಊರು ಅಧಿಕಾರ ಗಂಧ ಲೇಪಿತವಾದ ಊರು, ಸಿರಿವಂತಿಕೆಯ ಮದವೇರಿದ ಊರು, ಎಲ್ಲೆಲ್ಲೂ ಸತ್ತವರ ಸ್ಮಾರಕವೇ ಇರುವ ಊರು, ಹಳೆಯ ದೆಹಲಿಯಲ್ಲಿ ಚಾಂದನಿ ಚೌಕವೋ ಕೆಂಪು ಕೋಟೆಯ ಬಳಿಯೋ ಇಡೀ ದೆಹಲಿಯ ಹೃದಯ, ಕರುಳು, ಕಿಡ್ನಿಗಳ ಹಾಗೆ ಇರುವ ಜನ ಒಂದಿಷ್ಟೂ ಸುಳಿಯದ ಅನ್ ರಿಯಲ್ ಸಿಟಿ ನವ ದೆಹಲಿ ಅನಿಸಿತ್ತು. ಲಂಡನ್ ಕೂಡ ಅಂಥದೇ. ಹದಿನೈದನೆಯ ಶತಮಾನದಿಂದ ಇಂಗ್ಲೆಂಡು ರಾಜರು ರಾಣಿಯರು ಆಳುತಿದ್ದ ಪ್ರದೇಶದ ನೆರಳಿನಲ್ಲೇ ಹಳೆಯ ಅರಮನೆ ಈಗಿನ ಪಾರ್ಲಿಮೆಂಟು, ಪ್ರಧಾನಿಯ ನಿವಾಸ, ವೆಸ್ಟ್‌ಮಿನ್ಸ್ಟರ್ ಅಬೆ ಎಲ್ಲ ಇವೆ. ಹದಿನೈದು ದಿನ ಆಗುವಷ್ಟರಲ್ಲಿ ವೆಸ್ಟ್‌ಮಿನ್ಸ್ಟರ್ ವಿವರಗಳು ಆಗಲೇ ಮರೆತಿವೆ. ನೆನಪಿರುವುದು ಜನಜಂಗುಳಿ. ಸುಮಾರು ಸಾವಿರದ ಒಂದು ನೂರು ವರ್ಷಗಳಿಂದಲೂ ಜೀವಂತವಾಗಿ ಉಳಿದಿರುವ ಇಲ್ಲಿ ಈಗಲೂ ಆರಾಧನೆ, ಪ್ರಾರ್ಥನೆ ನಡೆಯುತ್ತವೆ. ಆದರೂ ಇದು ಇಂಗ್ಲೆಂಡಿನ ರಾಜಮನೆತನದ ಒಡೆತನಕ್ಕೆ ಸೇರಿದ ಚಾಪೆಲ್. ಖಾಸಗಿ ದೇಗುಲ. ಆದರೆ ಅಧಿಕೃತ ಹೆಸರು ಮಾತ್ರ ಕೊಲಿಜಿಯೇಟ್ ಚರ್ಚ್ ಆಫ್ ಸೇಂಟ್ ಪೀಟರ್ ಅಟ್ ವೆಸ್ಟ್‌ಮಿನ್ಸ್ಟರ್. ಮನಸಿನಲ್ಲಿ ವಿವರ ಉಳಿಯಲಿಲ್ಲವೆಂದು ತಡಕಿ ನೋಡಿದಾಗ ಇದು ರೋಮನ್ ಕೆಥೋಲಿಕ್ ಸಂಪ್ರದಾಯದಲ್ಲಿ ಬೆನೆಡಿಕ್ಟ್ ಪಂಥಕ್ಕೆ ಸೇರಿದ ಅಬೆ-ಅಥವ ಸನ್ಯಾಸಿ ಮಠವಾಗಿತ್ತು. ಗುರುಮನೆಯು ಅರಮನೆಯ ಭಾಗವಾಗಿ ಇಂಗ್ಲೆಂಡ್ ಆಳರಸ, ಅರಸಿಯರ ಪಟ್ಟಾಭಿಷೇಕ, ಮದುವೆ, ಸಮಾಧಿ ಎಲ್ಲದರ ತಾಣವಾಯಿತು.

ಇಲ್ಲಿರುವುದು ಮರಣ ವೈಭವ. ಇಂಗ್ಲೆಂಡಿನ ಪ್ರಮುಖ ರಾಜ ರಾಣಿಯರ ಸಮಾಧಿ ಸ್ಥಳ, ಶವಪೆಟ್ಟಿಗೆಗಳು, ಹಳೆಯ ಕುರ್ಚಿಯ ಹಾಗೆ ಕಾಣುವ ಪ್ರಾಚೀನ ಸಿಂಹಾಸನ, ಪಟ್ಟಾಭಿಷೇಕದ ಸ್ಥಳ, ಜೊತೆಗೆ ಕವಿಗಳ ಮೂಲೆ ಇವು ಹೆಚ್ಚು ಜನರನ್ನು ಸೆಳೆಯುತಿದ್ದವು. ಗೋಡೆಯ ಮೇಲೆ, ಗೋಡೆಯ ಗೂಡುಗಳಲ್ಲಿ, ನೆಲದ ಮೇಲೆ ಎಲ್ಲೆಲ್ಲೋ ಯಾರದ್ದೋ ನೆನಪಿನ ಚಿತ್ರ ವಿವರ... ಕಾಲಿಟ್ಟಲ್ಲಿ, ಕೈ ತಾಗಿದಲ್ಲಿ, ನೋಟ ಹರಿದಲ್ಲಿ ಸತ್ತವರ ಶಿಲ್ಪ, ಚಿತ್ರ, ಲ್ಯಾಟಿನ್, ಮಧ್ಯಕಾಲೀನ ಇಂಗ್ಲಿಷ್, ಆಧುನಿಕ ಇಂಗ್ಲಿಷ್‌ನಲ್ಲಿ ಬರೆದ ವಿವರ ಅಥವಾ ಹೆಸರು. ಅರಮನೆಗೆ ಹತ್ತಿರದಲ್ಲಿ ಅರಮನೆಯ ದೇಗುಲದಲ್ಲಿ ಹೆಣಕ್ಕೆ ಜಾಗ ಸಿಗಬೇಕಾದರೆ ಸತ್ತು ಇಲ್ಲಿ ಒರಗಿದವರೆಲ್ಲರೂ ಆಯಾ ಕಾಲದ ಗಣ್ಯ ಮಾನ್ಯರೇ ಇರಬೇಕು. ಹಾಗಂದುಕೊಳ್ಳುತಿದ್ದಾಗ ನೆಲದಮೇಲೆ ಒಂದೆಡೆಯಲ್ಲಿ ಈ ಕಟ್ಟಡವನ್ನು ಕಟ್ಟಿದ ಗಾರೆಯ ಕೆಲಸದ ಮುಖ್ಯಸ್ಥನ ಹೆಸರು ಕಾಣಿಸಿತು. ಇನ್ನೆಲ್ಲೋ